ಪ್ರಜಾವಾಣಿ

ಮೆಟ್ರೋ
ಬೆಂಗಳೂರು

# 'ಸಾಹಸ ಸಿಂಹ'ನ 'ಸ್ನೇಹ ಸಂಪತ್ತು..'!

ಸಾಹಸಸಿಂಹ ವಿಷ್ಣುವರ್ಧನ್ ಅವರ ವೈಯಕ್ತಿಕ ಬದುಕಿನ ಬಗ್ಗೆ ಬಹುಶಃ ಇದೇ ಮೊತ್ತ ಮೊದಲ ಬಾರಿಗೆ ಕೃತಿಯೊಂದು ಬಿಡುಗಡೆಯಾಗುತ್ತಿದೆ. ಈ ಪುಸ್ತಕದ ಹೆಸರೇ 'ಸ್ನೇಹ ಸಂಪತ್ತು'.

ಪರಿಸರ ಕಾಳಜಿಯ ಹಾಗೂ ಪ್ರೇಕ್ಷಣೀಯ ಸ್ಥಳಗಳಿಗೆ ಸಂಬಂಧಪಟ್ಟಂತೆ ಹಲವಾರು ಸಾಕ್ಷ್ಯಚಿತ್ರಗಳನ್ನು ತಯಾರಿಸಿದ, ಕರ್ನಾಟಕದ ಕುಸ್ತಿ ಪಟುಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಮೂರು ಪುಸ್ತಕಗಳನ್ನು ರೋಚಕವಾಗಿ ಬರೆದ ಎಂ. ನರಸಿಂಹ ಮೂರ್ತಿ ಈ ಬಾರಿ 'ಸಾಹಸ ಸಿಂಹ'ನ ವೈಯಕ್ತಿಕ ಬದುಕಿಗೆ ಕೈಹಾಕಿದ್ದಾರೆ. ಈ ಬಗ್ಗೆ ಅಧ್ಯಯನ ಮಾಡಿ ಓದುಗರ ಎದುರು ಮುಂದಿಡುವ ಪ್ರಯತ್ನ ಮಾಡಿದ್ದಾರೆ.

ಡಾ. ರಾಜ್ ಬಳಿಕ ಕನ್ನಡದಲ್ಲಿ ಅತ್ಯಂತ ಜನಪ್ರಿಯತೆ ಗಳಿಸಿ 200 ಯಶಸ್ವಿ ಚಿತ್ರಗಳಲ್ಲಿ ನಟಿಸಿ ಅಭಿಮಾನಿಗಳ ಮುಂದೆ 'ವೀರಾಧಿವೀರ', 'ಸಾಹಸ ಸಿಂಹ', 'ಯಜಮಾನ' ಎಂದಿತ್ಯಾದಿ ಹಲವಾರು 'ರೂಪ' ಧರಿಸಿ ಸ್ಮೃತಿ ಪಟಲದಲ್ಲಿ ಉಳಿದಿರುವ ಸಂಪತ್‌ಕುಮಾರ್ ಯಾನೆ ವಿಷ್ಣುವರ್ಧನ್ ಅವರ ವೈಯಕ್ತಿಕ ಬದುಕು ಕೂಡಾ ಸಿನಿಮಾದಷ್ಟೇ ಹೇಗೆ ರೋಚಕವಾಗಿತ್ತು ಎಂಬುದನ್ನು ಚಿತ್ರಿಸುವ ಯತ್ನವನ್ನು 'ಸ್ನೇಹ ಸಂಪತ್ತು' ಮಾಡಿದೆ ಎನ್ನುತ್ತಾರೆ ನರಸಿಂಹ ಮೂರ್ತಿ.



ವಿಷ್ಣು ಕಾಲೇಜು ದಿನಗಳು, ಕಾಲೇಜು ಪರಿಸರ, ಎಲ್ಲರೊಂದಿಗೆ ಬೆರೆಯುವ ಅವರ ವ್ಯಕ್ತಿತ್ವ, ಸಿನಿಮಾ ರಂಗಕ್ಕೆ ಬಂದ 70ರ ದಶಕದಲ್ಲಿ ಕನ್ನಡ ಚಿತ್ರರಂಗದ ಸ್ಥಿತಿಗತಿ, ಆ ಸಂದರ್ಭದಲ್ಲಿ ಬಂದ 'ನಾಗರ ಹಾವು' ಸಿನಿಮಾದ ವಿಶೇಷತೆ, ಇದರಲ್ಲಿನ ವಿಷ್ಣು ನಟನೆ ಇವುಗಳ ಬಗೆಗೆಲ್ಲ ಪುಸ್ತಕ ಕೈಯಾಡಿಸಿದೆ.

ನಟನೆಯ ಹೊರತಾಗಿ ವಿಷ್ಣು ಬದುಕು ಹೇಗಿತ್ತು? ಸ್ನೇಹಿತರ ಜೊತೆಗೆ ಸ್ನೇಹ ಜೀವಿ ಆಗಿದ್ದುದು ಹೇಗೆ, ಮಾನವೀಯತೆಯ ಜೊತೆಗೆ: ಚೇಷ್ಟೆ, ಆತ್ಮೀಯ ಒಡನಾಟಗಳಿಂದ ಎಲ್ಲರನ್ನು ಸೆಳೆಯುತ್ತಿದ್ದುದು ಹೇಗೆ ಎಂಬುದರ ಬಗ್ಗೆ ಒಂದೆಡೆಯಾದರೆ, ಅವರ ವಿಚಾರ ಮಂಥನ, ವ್ಯಾಪಕತೆಯನ್ನು ಬಿಡಿಸಿಡುವ ಪ್ರಯತ್ನ ಮಾಡಿದ್ದಾರೆ ಮೂರ್ತಿ.

■ ನೆತ್ರಕೆರೆ ಉದಯಶಂಕರ

### ಡಾ. ವಿಷ್ಣು ಜೀವನ ಚರಿತ್ರೆ

ನ್ಯಾಷನಲ್ ಕಾಲೇಜ್ ಹಿರಿಯ ವಿದ್ಯಾರ್ಥಿಗಳ ಸಂಘ ಮತ್ತು ಮಾಧ್ಯಮ ಕ್ರಿಯೇಷನ್ಸ್: ಭಾನುವಾರ ಭಾರತಿ ವಿಷ್ಣುವರ್ಧನ್ ಅವರಿಂದ ಎಂ. ನರಸಿಂಹಮೂರ್ತಿ ಅವರ 'ಸ್ನೇಹ ಸಂಪತ್ತು' (ಡಾ. ವಿಷ್ಣುವರ್ಧನ್ ಅವರ ಜೀವನ ಚರಿತ್ರೆ) ಕೃತಿ ಲೋಕಾರ್ಪಣೆ. ಸ್ಥಳ: ಗಾಂಧಿ ನೆಹರು ರಂಗಮಂದಿರ, ನ್ಯಾಷನಲ್ ಕಾಲೇಜು, ಬಸವನಗುಡಿ. ಸಂಜೆ 6.